

# ‘ನನಗೆ ನಾನೇ ಆತ್ಮಸಂಗಾತಿ’

‘ನನ್ನ ಆತ್ಮವನ್ನು ನಾನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ನನಗೆ ನಾನೇ ಬೆಸ್ಟ್‌ಫ್ರೆಂಡ್. ನನಗೆ ನಾನೇ ಆತ್ಮಸಂಗಾತಿ. ನಾನು ಅಂದ್ರೆ ಪರಿಪೂರ್ಣ ಪ್ರೀತಿ’ ಎಂದು ಘೋಷಿಸಿಕೊಂಡು ಸ್ವ–ಮದುವೆಯಾದರು 33 ವರ್ಷದ ಲಿಂಡಾ.

■ ಡಿ.ಎಂ.ಘನಶ್ಯಾಮ

ಬ್ರಿಟನ್‌ನ ಜನಪ್ರಿಯ ದಿನಪತ್ರಿಕೆ ‘ದಿ ಇಂಡಿಪೆಂಡೆಂಟ್’ ಈಚೆಗೆ **‘AUSTRALIAN WOMAN MARRIES HERSELF IN BEACH CEREMONY AND SAYS VOWS IN MIRROR’** (ಆಸ್ಟ್ರೇಲಿಯಾದ ಸಮುದ್ರ ಕಿನಾರೆಯಲ್ಲಿ ತನ್ನನ್ನೇ ತಾನು ಮದುವೆಯಾದ ಯುವತಿ) ಶೀರ್ಷಿಕೆಯಡಿ ಸುದ್ದಿಯೊಂದನ್ನು ಪ್ರಕಟಿಸಿತ್ತು. ಈ ಸುದ್ದಿ ಓದಿದ ಹಲವರಿಗೆ ‘ಸೊಲೊಗಮಿ’ (ಸ್ವ–ಮದುವೆ) ಪಾರಿಭಾಷಿಕ ಪದದ ಜೊತೆಗೆ ಈ ಹಿಂದೆ ಹೀಗೆಯೇ ಮದುವೆಯಾಗಿ ಸದ್ದು ಮಾಡಿದ್ದ ಕೆಲ ಯುವತಿಯರ ನೆನಪೂ ಆಗಿತ್ತು.

ಸಂಗಾತಿಯಿಂದ ಮೋಸವಾಗುತ್ತಿದೆ ಎಂಬ ಭಾವ, ಮೊದಲ ಬ್ರೇಕ್‌ಅಪ್ ನಂತರ ಚಿಗುರಿದ ಎರಡನೇ ಸಂಬಂಧದಲ್ಲೂ ಮತ್ತದೇ ಮೋಸದ ಅನುಭವ, ನೊಂದ ಮನಸುಗಳು, ಮುರಿದು ಬೀಳುತ್ತಿರುವ ಮದುವೆಗಳು, ಒಂದೇ ಸೂರಿನಡಿ ವರ್ಷಗಟ್ಟಲೆ ಇದ್ದರೂ ಬೆರೆಯದ ಮನಗಳು... ಇಷ್ಟೆಲ್ಲದರ ನಡುವೆ ‘ಎಲ್ಲಿ ಒಂಟಿ ಪಿಶಾಚಿಯಂತೆ ಸಾಯಬೇಕಾಗುತ್ತದೋ’ ಎಂಬ ಆತಂಕ ಅನುಭವಿಸುತ್ತಿರುವ ಮಹಿಳೆಯರು ಇದೀಗ ‘ಸ್ವ–ಮದುವೆ’ಯ ಮಂತ್ರ ಪಠಿಸುತ್ತಿದ್ದಾರೆ.

‘ವೈಯಕ್ತಿಕ ಸಂಬಂಧಗಳು’ (ಪರ್ಸನಲ್ ರಿಲೇಷನ್‌ಶಿಪ್) ವಿಷಯವನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡುವ ಹಲವರಿಗೆ 33 ವರ್ಷದ ಲಿಂಡಾ ಡೊಕ್ವಾರ್ ಪರಿಚಿತ ಹೆಸರು. ಸ್ವಂತ ವೆಬ್‌ಸೈಟ್, ಬ್ಲಾಗ್ ಹೊಂದಿರುವ ಲಿಂಡಾ ವೃತ್ತಿಪರ ಆಪ್ತಸಲಹಾಗಾರ್ತಿಯೂ ಹೌದು. ಆಕೆ ಕಳೆದ ವರ್ಷ ಪ್ರೇಮಿಗಳ ದಿನದಂದು ಆಸ್ಟ್ರೇಲಿಯಾದ ಸಮುದ್ರ ಕಿನಾರೆಯಲ್ಲಿ ನಡೆದ ಸುಂದರ ಸಮಾರಂಭದಲ್ಲಿ ತನ್ನನ್ನು ತಾನು ಮದುವೆಯಾದರು.

ಕೇವಲ ಇಬ್ಬರು ಆಪ್ತರಿಗೆ ಮಾತ್ರ ಈ ವಿಶಿಷ್ಟ ಸನ್ನಿವೇಶಕ್ಕೆ ಸಾಕ್ಷಿಯಾಗಲು ಅವಕಾಶವಿತ್ತು. ಕನ್ನಡಿಯಲ್ಲಿ ತಮ್ಮದೇ ಬಿಂಬ ನೋಡುತ್ತಾ, ಲಿಂಡಾ ಮದುವೆಯ ಪ್ರತಿಜ್ಞೆಯನ್ನು ನುಡಿದರು.

‘ಈಗಷ್ಟೇ ನಾನು ನನ್ನನ್ನು ಮದುವೆಯಾಗಿದ್ದೇನೆ. ಸ್ವ–ಪ್ರೀತಿ, ಸ್ವ–ಮದುವೆ ಎನ್ನುವುದು ಮನುಷ್ಯರಿಗೆ ಬಹುದಿನಗಳಿಂದಲೂ ಗೊತ್ತು. ನನ್ನ ಆತ್ಮವನ್ನು ನಾನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ನನಗೆ ನಾನೇ ಬೆಸ್ಟ್‌ಫ್ರೆಂಡ್. ನನಗೆ ನಾನೇ ಆತ್ಮಸಂಗಾತಿ. ನಾನು ಅಂದ್ರೆ ಪರಿಪೂರ್ಣ ಪ್ರೀತಿ’ ಎಂದು ಘೋಷಿಸಿಕೊಂಡರು.

ಇತ್ತ ಆಸ್ಟ್ರೇಲಿಯಾದಲ್ಲಿ ಲಿಂಡಾ ಡೊಕ್ವೊರ್ ಸ್ವ–ಮದುವೆಯಾದ ದಿನವೇ ಅತ್ತ ಬ್ರಿಟನ್‌ನಲ್ಲಿ ಎಮ್ಮಾ ಜೇನ್ ಲವ್ ತಮ್ಮನ್ನು ತಾವು ಮದುವೆಯಾಗಿದ್ದರು. ವೇಶ್ಯೆಯಾಗಿದ್ದ ಎಮ್ಮಾ ಆ ವೃತ್ತಿಯನ್ನು ತ್ಯಜಿಸಿದ್ದೇನೆ ಎಂದು ಘೋಷಿಸಿಕೊಂಡು ‘ಲವ್‌ಕೋಚ್’ (ಪ್ರೇಮಿಗಳಿಗೆ ಮಾರ್ಗದರ್ಶಕಿ) ಆಗಿದ್ದಾರೆ. ಸ್ವ–ಮದುವೆಯ ಟ್ರೆಂಡ್ ಜನಪ್ರಿಯವಾಗಲು ಎ.ಜೆ.ಲವ್ ಕಾರಣ ಎಂದು ಜಗತ್ತು ಮಾತನಾಡಿಕೊಳ್ಳುತ್ತಿದೆ. ಈಕೆಯ ಮದುವೆ ವಿಚಾರವೂ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೆಂಡಿಂಗ್ ಆಗಿತ್ತು.

2015ರಲ್ಲಿ ಸೋಫಿಯಾ ಟ್ಯಾನರ್ ಸ್ವ–ಮದುವೆಯಿಂದ ಸುದ್ದಿಯಾಗಿದ್ದರು. ‘ನಾನು ಒಂದು ಸಲ ಮೋಸ ಹೋಗಿದ್ದೆ. ಆದರೂ ಮತ್ತೊಮ್ಮೆ ಅದೇ ಹಳ್ಳಕ್ಕೆ ಬಿದ್ದೆ. ನನ್ನ ಸಂಗಾತಿ ನನ್ನ ಹೆಗಲ ಮೇಲೆ ತಲೆಯಿಟ್ಟೇ ಬೇರೆ ಹುಡುಗಿಯರನ್ನು ಆಸೆಗಣ್ಣಿನಿಂದ ನೋಡುತ್ತಿದ್ದ. ಈಗ ನಾನು ಗಟ್ಟಿ ನಿರ್ಧಾರ ಮಾಡಿಬಿಟ್ಟಿದ್ದೇನೆ. ನನ್ನ ನಿರಾಶೆಯನ್ನು ನಾನೊಬ್ಬಳೇ ಅನುಭವಿಸುತ್ತೇನೆ, ನನ್ನ ವೈಫಲ್ಯವನ್ನು ಒಪ್ಪಿಕೊಳ್ಳುತ್ತೇನೆ. ನಾನು ರೋಗಿಯಾಗಿದ್ದೇನೋ–ಆರೋಗ್ಯವಾಗಿದ್ದೇನೋ ಸದಾ ನನಗೆ ನಾನೇ ಬೆಸ್ಟ್ ಫ್ರೆಂಡ್. ನನ್ನ ಗೆಲುವನ್ನು ನಾನು ಸಂಭ್ರಮಿಸುತ್ತೇನೆ’ ಎಂದು 2017ರಲ್ಲಿ ಅವರು ಆಡಿದ್ದ ಮಾತುಗಳು ಹಲವು ಯುವತಿಯರ ಮನಸ್ಸು ಕಲಕಿದ್ದವು.

ತನ್ನ 40ನೇ ವಯಸ್ಸಿನಲ್ಲಿ ಸ್ವ–ಮದುವೆಯ ಮೂಲಕ ಇಟಲಿಯಲ್ಲಿ